INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-7, Issue -1, January--February, 2025,
PageNo,05- 12
Peer -Reviewed, Refereed Journal

# ವಸಾಹತುಶಾಹಿ ಕಾಲದಲ್ಲಿ ಕಲಬುರ್ಗಿ ನಗರೀಕರಣ–ಒಂದು ಸಮೀಕ್ಷೆ

ಶ್ರೀಕಂಠ.[1]

'ವಸಾಹತು' ಎಂದರೆ ಒಂದು ರಾಜ್ಯದ ನೆಲಸಿಗರ ನೇರ ರಾಜಕೀಯ ನಿಯಂತ್ರಣದಲ್ಲಿರುವ ಮತ್ತು ಅವರಿಂದ ಆಕ್ರಮಿತವಾದ ಪ್ರಾಂತ್ಯ ಇದು ಸಾರ್ವಭೌಮನ ತವರು ಪ್ರಾಂತ್ಯದಿಂದ ಭಿನ್ನವಾಗಿದೆ. ಪ್ರಾಚೀನ ಕಾಲದಲ್ಲಿನ ವಸಾಹತುಗಳ ವಿಷಯದಲ್ಲಿ, ನಗರ ರಾಜ್ಯಗಳು ಹಲವು ವೇಳೆ ತಮ್ಮ ಸ್ವಂತದ ವಸಾಹತುಗಳನ್ನು ಸ್ಥಾಪಿಸುತ್ತಿದ್ದವು. ಕೆಲವು ವಸಾಹತುಗಳು ಐತಿಹಾಸಿವಾಗಿ ದೇಶಗಳಾಗಿದ್ದರೆ, ಇತರ ವಸಾಹತುಗಳು ಅವುಗಳ ಪ್ರಾರಂಭದಿಂದ ನಿರ್ದಿಷ್ಟ ರಾಜ್ಯತ್ವವಿರದ ಪ್ರಾಂತ್ಯಗಳಾಗಿದ್ದವು.ಕೈಗೊಂಬೆ ರಾಜ್ಯ ಅಥವಾ ಪರಾಧೀನ ರಾಜ್ಯದಂತಿರದೆ, ವಸಾಹತು ಯಾವುದೇ ಸ್ವತಂತ್ರ ಅಂತರರಾಷ್ಟ್ರೀಯ ಪ್ರಾತಿನಿಧ್ಯವನ್ನು ಹೊಂದಿರುವುದಿಲ್ಲ ಮತ್ತು ಅದರ ಅಗ್ರಮಟ್ಟದ ಆಡಳಿತವು ತವರು ರಾಜ್ಯದ ನೇರ ನಿಯಂತ್ರದಲ್ಲಿರುತ್ತದೆ.

ಭಾರತವು 1858 ರಿಂದ 1947 ರವರೆಗೆ ಯುನೈಟೆಡ್ ಕಿಂಗ್ಡಮ್ ಸರ್ಕಾರದ ನೇರ ನಿಯಂತ್ರಣದಲ್ಲಿದ್ದ ಸಾಮ್ರಾಜ್ಯಶಾಹಿ ರಾಜಕೀಯ ಘಟಕವಾಗಿತ್ತು. ಇದು ಇಂದಿನ ಭಾರತ, ಪಾಕಿಸ್ತಾನ, ಬಾಂಗ್ಲಾದೇಶ, ಮ್ಯಾನ್ಮಾರ್ ಹಾಗೂ ಯುನೈಟೆಡ್ ಅರಬ್ ಎಮಿರೇಟ್ಸ್‌ನ್ನು ಒಳಗೊಂಡಿತ್ತು. 15ನೇ ಶತಮಾನದಿಂದ 1960ರ ವರೆಗೆ ಪೋರ್ಚುಗೀಸ್ ಭಾರತ (ಗೋವಾ) ಪೋರ್ಚುಗಲ್‌ನ ವಸಾಹತುವಾಗಿತ್ತು.

ನಗರೀಕರಣ ರಾಷ್ಟ್ರವೊಂದರಲ್ಲಿ ವಿಫುಲ ಅವಕಾಶಗಳು ಉಳ್ಳ ನಗರಗಳು ಹೆಚ್ಚಾಗುವ ಪ್ರಕ್ರಿಯೆಯನ್ನು ನಗರೀಕರಣ ಎಂದು ಕರೆಯಲಾಗುತ್ತದೆ. ವ್ಯಾಪಕ ನಗರೀಕರಣ 20ನೇ ಶತಮಾನದ ಪ್ರಮುಖ ಬೆಳವಣಿಗೆ. ಒಂದು ದೇಶದ ಜನರನ್ನು ಗ್ರಾಮೀಣ ಮತ್ತು ನಗರೀಯ ಎಂದು ವರ್ಗೀಕರಿಸಬಹುದು. ಒಂದು ದೇಶದಲ್ಲಿ ಗ್ರಾಮೀಣ ಜನಸಂಖ್ಯೆಗೂ ನಗರೀಯ ಜನಸಂಖ್ಯೆಗೂ ಇರುವ ಅನುಪಾತ ಅಲ್ಲಿಯ ಆರ್ಥಿಕ, ಸಾಮಾಜಿಕ ಹಾಗೂ ಜನವಲಸೆಯ ಸ್ವರೂಪಗಳಿಗೆ ಅನುಗುಣವಾಗಿರುತ್ತದೆ. ನಗರ ಪ್ರದೇಶದ ಸಾಪೇಕ್ಷ ಬೆಳವಣಿಗೆಯ ಪ್ರಕ್ರಿಯೆಯೇ ನಗರೀಕರಣ. ನಗರ ಪ್ರದೇಶದಲ್ಲಿ ವಾಸಿಸುವ

[1].ಸಂಶೋಧಕರು, ಇತಿಹಾಸ ಅಧ್ಯಯನ ವಿಭಾಗ,ಮೈಸೂರು ವಿಶ್ವವಿದ್ಯಾನಿಲಯ ಮಾನಸ ಗಂಗೋತ್ರಿ, ಮೈಸೂರು.

ಜನಸಂಖ್ಯೆಯಿಂದ ನಗರೀಕರಣದ ಪ್ರಮಾಣವನ್ನು ಅರಿಯಬಹುದು. ನಗರೀಯ ಕೇಂದ್ರಗಳು ಆರ್ಥಿಕ ಪ್ರಗತಿಯ ವೇಗವರ್ಧನೆಯ ಸಾಧನಗಳಾಗಿರುವುದುಂಟು ಆದ್ದರಿಂದ ಅವುಗಳಿಂದ ಕೆಲವು ಅನುಕೂಲಗಳುಂಟು. ಆದರೆ ಅವುಗಳಿಂದ ಸಾಮಾಜಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಕೆಲವು ಸಮಸ್ಯೆಗಳೂ ಉದ್ಭವಿಸುತ್ತವೆ. ಅನುಕೂಲಗಳನ್ನು ಬಳಸಿಕೊಳ್ಳುವ ಮತ್ತು ಸಮಸ್ಯೆಗಳ ಪರಿಹಾರದ ದೃಷ್ಟಿಯಿಂದ ಒಂದು ದೇಶದ ನಗರೀಕರಣದ ಅಧ್ಯಯನ ಅಗತ್ಯವೆನಿಸುತ್ತದೆ. ಜನಗಣತಿಯಲ್ಲಿ ನಗರೀಕರಣಕ್ಕೆ ಸಂಬಂಧಿಸಿದ ವಿವರಗಳನ್ನೂ ಸಾಮಾನ್ಯವಾಗಿ ಸಂಗ್ರಹಿಸಲಾಗುತ್ತದೆ. ಪ್ರತಿಯೊಂದು ದೇಶದ ಜನಸಂಖ್ಯೆಯನ್ನೂ ಸಾಮಾನ್ಯವಾಗಿ ನಗರೀಯ ಹಾಗೂ ಗ್ರಾಮೀಣ ಎಂದು ವರ್ಗೀಕರಿಸುವುದು ಸಾಮಾನ್ಯವಾದರೂ ಈ ವಿಚಾರದಲ್ಲಿ ಎಲ್ಲ ದೇಶಗಳೂ ಒಂದೇ ಮಾನದಂಡವನ್ನು ಇಟ್ಟುಕೊಂಡಿರುವುದಿಲ್ಲ. ಆಯಾ ದೇಶದ ಪರಿಸ್ಥಿತಿಗೆ ಅನುಗುಣವಾಗಿ ಇದು ವ್ಯತ್ಯಾಸವಾಗುತ್ತದೆ.

**ದೇಶಾವಾರು ಜನಸಂಖ್ಯೆ**

ಉದಾಹರಣೆಗೆ ಸ್ವೀಡನ್ನಿನಲ್ಲಿ 200 ಜನರಿರುವ ವಸತಿ ಪ್ರದೇಶವನ್ನು ನಗರೀಯವೆಂದು ಹೇಳಲಾಗುತ್ತದೆ. ಆದರೆ ದಕ್ಷಿಣ ಆಫ್ರಿಕಾದಲ್ಲಿ 500, ಕೆನಡದಲ್ಲಿ 1000, ಪೂರ್ವ ಜರ್ಮನಿಯಲ್ಲಿ 2000, ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ 2500, ಜಾರ್ಡನಿನಲ್ಲಿ 10,000 ಜನರಿರುವ ಪ್ರದೇಶಗಳನ್ನು ನಗರೀಯ ಎಂದು ಪರಿಗಣಿಸಲಾಗುತ್ತದೆ.

**ಭಾರತದಲ್ಲಿ ಒಂದು ಪ್ರದೇಶವನ್ನು ನಗರ ಪ್ರದೇಶ ಎಂದು ಕರೆಯಬೇಕಾದರೆ**

- ಅಲ್ಲಿ ಕನಿಷ್ಠ 5000 ಜನಸಂಖ್ಯೆ ಇರಬೇಕು.
- ಅಲ್ಲಿಯ ಪುರುಷ ದುಡಿಮೆಗಾರರಲ್ಲಿ ಕನಿಷ್ಠ ಮುಕ್ಕಾಲು ಪಾಲು ಜನ ಕೃಷಿಯನ್ನು ಹೊರತು ಪಡಿಸಿದ ಕಾರ್ಯಚಟುವಟಿಕೆಗಳಲ್ಲಿ ನಿರತರಾಗಿರಬೇಕು.
- ಪ್ರತಿ ಚ.ಕಿಮೀ.ಗೆ ಕನಿಷ್ಠ 400 ರಂತೆ (ಚ.ಮೈ.ಗೆ 1000) ಜನಸಾಂದ್ರತೆ ಇರಬೇಕು.
- ಪೌರಸಭಾ, ಕಾರ್ಪೋರೇಷನ್ ಅಥವಾ ದಂಡು ಇರುವ, ಇಲ್ಲವೇ ನಗರ ಪ್ರದೇಶವೆಂದು ಅಧಿಸೂಚಿತವಾಗಿರುವ ಎಲ್ಲ ಸ್ಥಳಗಳೂ ನಗರೀಯ ಪ್ರದೇಶಗಳೆನ್ನಿಸಿಕೊಳ್ಳುತ್ತವೆ.

ನಗರೀಕರಣ ಪ್ರಪಂಚದಾದ್ಯಂತ ವೇಗವಾಗಿ ಆಗುತ್ತಿರುವುದು, 20ನೇ ಶತಮಾನದ ಪ್ರಮುಖ ಬೆಳವಣಿಗೆ, ಏಷ್ಯಾ ಮತ್ತು ಆಫ್ರಿಕಗಳಂಥ ಹಿಂದುಳಿದ ಪ್ರದೇಶಗಳಿಗಿಂತ ಅಮೆರಿಕ, ಯೂರೋಪ್, ಓಷಿಯಾನಿಯ ಈ ಪ್ರದೇಶಗಳಲ್ಲಿ ನಗರೀಕರಣ ಹೆಚ್ಚಿನ ವೇಗದಲ್ಲಿ ಸಂಭವಿಸಿದೆ. ಮುಂದುವರಿದ ಪ್ರದೇಶಗಳಲ್ಲಿ ತೀವ್ರಗತಿಯಲ್ಲಿ ನಗರೀಕರಣವಾಗುತ್ತಿರಲು ಕಾರಣ ಅಲ್ಲಿಯ ಕೈಗಾರಿಕಾಭಿವೃದ್ಧಿ ಮತ್ತು ಅದರಿಂದ ಹೆಚ್ಚಿ ವಾಣಿಜ್ಯ ಚಟುವಟಿಕೆಗಳಿಗೆ ಅಲ್ಲಿ ತೀವ್ರವಾಗಿ ಏರುತ್ತಿರುವ ಬೇಡಿಕೆ ಕಾರಣವಾಗಿತ್ತು.

**ವಸಾಹತುಶಾಹಿ ನಗರೀಕರಣಕ್ಕೆ ಕಾರಣವಾದ ಅಂಶಗಳು**

ಸಾಮಾನ್ಯವಾಗಿ ಮೂರು.

1. ಜನಸಂಖ್ಯೆಯ ಸ್ವಾಭಾವಿಕ ಬೆಳವಣಿಗೆಯ ಫಲವಾದ ಏರಿಕೆ.
2. ಗ್ರಾಮ ಪ್ರದೇಶಗಳಿಂದ ಪಟ್ಟಣಗಳಿಗೆ ಜನರ ವಲಸೆ.
3. ವಿದೇಶಿ ಮಾರುಕಟ್ಟೆ ಮತ್ತು ಆಂತರಿಕ ಮಾರುಕಟ್ಟೆ ವ್ಯಾಪಾರ ಸಂಬಂಧ.

ಪಟ್ಟಣ ಪ್ರದೇಶಗಳಲ್ಲಿ ಆರೋಗ್ಯ, ನೈರ್ಮಲ್ಯ ಹಾಗೂ ಆಹಾರ ಗುಣಮಟ್ಟ ಉತ್ತಮವಾಗಿರುವುದರಿಂದ ಗ್ರಾಮ ಪ್ರದೇಶಗಳಲ್ಲಿರುವುದಕ್ಕಿಂತ ನಗರ ಪ್ರದೇಶಗಳಲ್ಲಿ ಮರಣ ದರ ಕಡಿಮೆಯಾಗಿರುತ್ತದೆ. ಆದ್ದರಿಂದ ಹೆಚ್ಚಿನ ಪ್ರಮಾನದಲ್ಲಿ ಜನಸಂಖ್ಯೆಯ ಏರಿಕೆ ಆಗುವ ಸಾಧ್ಯತೆ ಇರುತ್ತದೆ. ಎರಡನೆಯದಾಗಿ, ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗಾವಕಾಶಗಳು ಕಡಿಮೆ ಆದ್ದರಿಂದ ಅಲ್ಲಿಯ ಜನರು. ಉದ್ಯೋಗಾಕಾಂಕ್ಷೆಯಿಂದ ಪಟ್ಟಣಗಳಿಗೆ ಹೋಗುತ್ತಾರೆ. ಪಟ್ಟಣಗಳಲ್ಲಿಯ ಹೆಚ್ಚಿನ ಉದ್ಯೋಗಾವಕಾಶಗಳು ಮನೋರಂಜನೆ, ಆರೋಗ್ಯ, ನೈರ್ಮಲ್ಯ, ಶಿಕ್ಷಣ ಸೌಲಭ್ಯ ಮೊದಲಾದ ಅನುಕೂಲಗಳು ಗ್ರಾಮ ನಿವಾಸಿಗಳನ್ನು ಅವುಗಳತ್ತ ಸೆಳೆಯುತ್ತವೆ. ಇದರಿಂದ ನಗರೀಕರಣದ ವೇಗ ಹೆಚ್ಚುತ್ತದೆ. 1980 ರಿಂದ ಭಾರತದ ಗ್ರಾಮಗಳಲ್ಲಿ ಉದ್ಯೋಗದ ಅವಕಾಶಗಳು ಕಡಿಮೆಯಾಗುತ್ತಾ, ಕೂಲಿಯನ್ನು ಅರಸಿ, ಗ್ರಾಮಸ್ಥರು ನಗರಗಳಿಗೆ ವಲಸೆಯಾಗುವ ಪ್ರಕ್ರಿಯೆ ಹೆಚ್ಚಾಯಿತು. [[en:Urbanisation_in_India]] 1901ರಲ್ಲಿ 11.4% ಭಾರತೀಯರು ನಗರಗಳಲ್ಲಿ ವಾಸ ಮಾಡುತ್ತಿದ್ದರು ಎಂಬುದು ಜನಗಣತಿಯ ಲೆಕ್ಕ ಆಗಿತ್ತು. 2001ರ ಜನಗಣತಿಯಂತೆ ಇದು ಶೇಕಡ 28.53% ಇದೆ.

ಭಾರತದಲ್ಲಿ ನಗರೀಕರಣ ಪ್ರಪಂಚದ ಉಳಿದ ಪ್ರದೇಶಗಳಂತೆಯೇ ಭಾರತದಲ್ಲೂ ದೊಡ್ಡ ನಗರಗಳ ಬೆಳವಣಿಗೆಯಾಗುತ್ತಿದೆ. 1901ರಲ್ಲಿ ಒಂದು ಲಕ್ಷಕ್ಕಿಂತಲೂ ಹೆಚ್ಚಿನ ಜನಸಂಖ್ಯೆಯುಳ್ಳ ನಗರಗಳ ಸಂಖ್ಯೆ 25 ಮಾತ್ರವಿತ್ತು. 1971ರ ವೇಳೆಗೆ ಅಂಥ ನಗರಗಳ ಸಂಖ್ಯೆ 151. ನಗರ ಪ್ರದೇಶದ ಒಟ್ಟು ಜನಸಂಖ್ಯೆಯ ಮೂರನೆಯ ಎರಡು ಪಾಲು ಜನ ಇಂಥ ನಗರಗಳಲ್ಲಿಯೇ ವಾಸಿಸುತ್ತಾರೆ. ಹತ್ತು ಲಕ್ಷಕ್ಕಿಂತ ಅಧಿಕ ಜನಸಂಖ್ಯೆ ಉಳ್ಳ ನಗರಗಳ ಸಂಖ್ಯೆ 1911ರಲ್ಲಿ ಎರಡು ಮಾತ್ರವಿತ್ತು. 1971 ರಲ್ಲಿ ಅಂತಹ 8 ನಗರಗಳು ಇದ್ದವು. ಅದಾಗ ಅವುಗಳನ್ನು ಮೆಟ್ರೋ ನಗರಗಳು ಎಂದು ಪರಿಗಣನೆಗೆ ಮಾಡಲಾಯಿತು. ಅವುಗಳ ಪೈಕಿ ಮುಂಬೈ, ದೆಹಲಿ, ಬೆಂಗಳೂರು ಮತ್ತು ಅಹಮದಾಬಾದ್ ಅತಿ ಹೆಚ್ಚಿನ ದರದಲ್ಲಿ ಬೆಳೆಯುತ್ತಿತ್ತು. (ಉಳಿದ ನಾಲ್ಕು ದೊಡ್ಡ ನಗರಗಳು ಕಲ್ಕತ್ತ, ಮದ್ರಾಸ್, ಹೈದರಾಬಾದ್ ಮತ್ತು ಕಾನ್ಪುರ). 2001ರ

ಜನಗಣತಿಯಲ್ಲಿ ಇಂತಹ 500 ನಗರಗಳು ಇದ್ದವು. 2050ರ ಹೊತ್ತಿಗೆ, 80 ಕೋಟಿಗೂ ಮಿಗಿಲಾಗಿ ಭಾರತೀಯರು ನಗರಗಳಲ್ಲಿ ವಾಸಿಸುತ್ತಾರೆ ಎಂದು ಅಂದಾಜು ಮಾಡಲಾಗಿದೆ.

ನಿಜಾಮರ ಆಡಳಿತ ಕೇಂದ್ರ ನಂತರ ಮೊಘಲ್ ಸುಲ್ತಾನರು ಔರಂಗಜೇಬನ ನೇತೃತ್ವದಲ್ಲಿ ದಖ್ಖನ್ ಪ್ರದೇಶ ಒಳಗೊಂಡಂತೆ ದಕ್ಷಿಣ ಭಾರತವನ್ನು ತಮ್ಮ ವಶಪಡಿಸಿಕೊಂಡರು. ಕ್ರಿ.ಶ.1726ರಲ್ಲಿ ಮೊಘಲರ ಆಡಳಿತದಿಂದ ಬೇರ್ಪಟ್ಟು ಸ್ವತಂತ್ರ ರಾಜ್ಯ ಸ್ಥಾಪಿಸಿದ ಅಸಫ್–ಜಾಹಿ (ನಿಜಾಮ್) ಸಾಮ್ರಾಜ್ಯ ಸ್ಥಾಪಿತವಾದಾಗ ಹೈದರಾಬಾದ್ ನಿಜಾಮ 1863ರಲ್ಲಿ ನಿಜಾಮ್ ಸರಕಾರ ಜಿಲ್ಲಾ ಬಂಧಿಯನ್ನು ರಚಿಸಿದಾಗ ಸುರಪುರವು ಜಿಲ್ಲಾ ಕೇಂದ್ರವಾಗಿ ಸ್ಥಾಪಿಸಿ ಗುಲ್ಬರ್ಗದ 9 ತಾಲ್ಲೂಕುಗಳು ಅದಕ್ಕೆ ಸೇರಿದವು. ನಂತರ ರಾಜ್ಯದ ಆಡಳಿತದ ಅನುಕೂಲಕ್ಕಾಗಿ ಕಲಬುರ್ಗಿಯನ್ನು 1873ರಲ್ಲಿ ಗುಲ್ಬರ್ಗವು 7 ತಾಲ್ಲೂಕುಗಳನ್ನು ಒಳಗೊಂಡ ಪ್ರತ್ಯೇಕ ಜಿಲ್ಲೆಯಾಗಿತು. ಕಲಬುರ್ಗಿಯನ್ನು ಒಂದು ಜಿಲ್ಲಾ ಕೇಂದ್ರವಾಗಿ ಅಭಿವೃದ್ಧಿಯಾಗಲು ಅಲ್ಲಿನ ಪ್ರಸಿದ್ಧ ಸೂಫಿ ಸಂತರ ನೆಲೆಯಾಗಿದ್ದ ಕಲಬುರ್ಗಿಯು ಅನೇಕರಿಗೆ ಆಕರ್ಷಣೆಯ ಕೇಂದ್ರವಾಗಿ ಮುಂದುವರೆಯಿತು. ನಿಜಾಮರ ಆಳ್ವಿಕೆಯ ಅನೇಕ ಶಾಸನಗಳು ಹಲವು ಬಾವಿಗಳನ್ನು ನಿರ್ಮಿಸಿದ ಉಲ್ಲೇಖಿಸುತ್ತವೆ. ಕೋಟೆಯ ಪಶ್ಚಿಮ ದ್ವಾರದ ಗೋಡೆಯಲ್ಲಿರುವ ಕ್ರಿ.ಶ.1805ರ ಪರ್ಶಿಯನ್ ಶಾಸನವು ನಿಜಾಮರ ಕಾಲದಲ್ಲಿ ಕೈಗೊಂಡ ಆಡಳಿತ ವ್ಯವಸ್ಥೆಯ ಬಗ್ಗೆ ಮಾಹಿತಿ ನೀಡುತ್ತದೆ. ನುರುಲ್ಲಾ–ಇ–ಮುಲ್ಕ್ ಎಂಬ ಅಧಿಕಾರಿಯನ್ನು ಕಲಬುರ್ಗಿಯ ಆಡಳಿತಕ್ಕೆ ನೇಮಕ ಮಾಡಲಾಗಿತ್ತು. 19ನೇ ಶತಮಾನದಲ್ಲಿ ನಡೆದ ಔದ್ಯೋಗಿಕರಣ ಸಂದರ್ಭದಲ್ಲಿ ಕುಲಬುರ್ಗಿಯಲ್ಲಿ ನಿಜಾಮ ರಾಜ್ಯವು ಕಾರ್ಖಾನೆಗಳನ್ನು ಸ್ಥಾಪಿಸುವುದರೊಂದಿಗೆ ಆಧುನಿಕ ನಗರಕ್ಕೆ ಕಲಬುರ್ಗಿಯು ತೆರೆದುಕೊಂಡಿತು.

1805ರಲ್ಲಿ, ಎರಡನೇ ಆಂಗ್ಲೋ–ಮರಾಠ ಯುದ್ಧದಲ್ಲಿ ಈಸ್ಟ್ ಇಂಡಿಯಾ ಕಂಪನಿಯ ವಿಜಯದ ನಂತರ, ಹೈದರಾಬಾದ್ ನಿಜಾಮನು ಅವರ ರಕ್ಷಣೆಗೆ ಒಳಪಟ್ಟನು. 1858ರಲ್ಲಿ, ಹೈದರಾಬಾದ್ ರಾಜ್ಯವು ಬ್ರಿಟಿಷ್ ಭಾರತೀಯ ಸಾಮ್ರಾಜ್ಯದ ಭಾಗವಾಯಿತು, ಇದು ವಸಾಹತುಶಾಹಿ ಆಳ್ವಿಕೆಯಲ್ಲಿದ್ದರೂ ಮತ್ತು ಬ್ರಿಟಿಷ್ ಕಿರೀಟಕ್ಕೆ ಒಳಪಟ್ಟಿದ್ದರೂ ಪೂರ್ಣ ಸ್ವಾಯತ್ತತೆಯನ್ನು ಹೊಂದಿತ್ತು.

1876 ರಿಂದ 1984ರವರೆಗೆ, ಯುನೈಟೆಡ್ ಕಿಂಗ್‌ಡಂನ ರಾಜನು ಏಕಕಾಲದಲ್ಲಿ ಭಾರತದ ಚಕ್ರವರ್ತಿ ಎಂಬ ಬಿರುದನ್ನು ಹೊಂದಿದ್ದರಿಂದ ನಿಜಾಮ್ ಕ್ರೌನ್ ಅನ್ನು ಭಾರತದ ಸರ್ವೋಚ್ಚ ಆಡಳಿತಗಾರ ಎಂದು ಗುರುತಿಸಿದರು. ಮೊಘಲ್ ಶಕ್ತಿಯ ಅವನತಿಯ ನಂತರ ಡೆಕ್ಕನ್ ಪ್ರದೇಶವು ಮರಾಠ ಸಾಮ್ರಾಜ್ಯದ ಉದಯವನ್ನು ಕಂಡಿತು. 1720ರ ದಶಕದಿಂದ ಮೊಘಲ್ ಮರಾಠ ಯುದ್ಧಗಳ ಸಮಯದಲ್ಲಿ ನಿಜಾಮರು ಸ್ವತಃ ಹೋರಾಡಿದರು. ಇದರ ಪರಿಣಾಮವಾಗಿ ನಿಜಾಮರು ಮರಾಠರಿಗೆ ನಿಯಮಿತ ತೆರಿಗೆ (ಚೌತ್) ಪಾವತಿಸಿದರು. ಮರಾಠರು ಮತ್ತು ನಿಜಾಮನ ನಡುವೆ ನಡೆದ ಪ್ರಮುಖ ಯುದ್ಧಗಳಲ್ಲಿ ಪಾಲ್ಖೇಡ್, ಭೂಪಾಲ್, ರಾಕ್ಷಸಭುವನ್ ಮತ್ತು ಖಾರ್ಡಾ ಸೇರಿವೆ. ಇವೆಲ್ಲವುಗಳಲ್ಲಿ ನಿಜಾಮರು

ಸೋತರು. ನಿಜಾಮನು ಮೂಲಭೂತವಾಗಿ ಮರಾಠರ ಉಪನದಿಯಾಗಿ ಉಳಿದನು. ನಿಜಾಮರು ರೈಲ್ವೆಯನ್ನು ಅಭಿವೃದ್ಧಿಪಡಿಸಿದರು, ವಿದ್ಯುತ್ತನ್ನು ಪರಿಚಯಿಸಿದರು ಮತ್ತು ರಸ್ತೆಗಳು, ವಾಯುಮಾರ್ಗಗಳು, ನೀರಾವರಿ ಮತ್ತು ಜಲಾಶಯಗಳನ್ನು ಅಭಿವೃದ್ಧಿಪಡಿಸಿದರು. ವಾಸ್ತವವಾಗಿ ನಗರದ ಎಲ್ಲಾ ಪ್ರಮುಖ ಸಾರ್ವಜನಿಕ ಕಟ್ಟಡಗಳನ್ನು ಗುಲಬುರ್ಗಾ ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯ ಅವಧಿಯಲ್ಲಿ ಅವರ ಆಳ್ವಿಕೆಯಲ್ಲಿ ನಿರ್ಮಿಸಲಾಯಿತು. ಅವರು ಶಿಕ್ಷಣ, ವಿಜ್ಞಾನ ಮತ್ತು ವ್ಯಾಪಾರ ವಾಣಿಜ್ಯ, ಪ್ರಗತಿ ಕಂಡಿತು.

**ಬ್ರಿಟಿಷರ ಆಡಳಿತ:** ಆಂಗ್ಲ ಮರಾಠ ಯುದ್ಧ ನಂತರ ಬ್ರಿಟಿಷರು ಆಧುನಿಕ ಗುಲಬರ್ಗಾ, ರಾಯಚೂರು, ಕೊಪ್ಪಳ ಮತ್ತು ಬೀದರ್ ಜಿಲ್ಲಾ ಪ್ರದೇಶಗಳನ್ನು ಹೈದರಾಬಾದ್ ನಿಜಾಮನ ಅಧಿಕಾರಕ್ಕೆ ಒಳಪಡಿಸಿದರು.ನಂತರ ಗುಲ್ಬರ್ಗ ಆಧುನಿಕ ವಸಾಹತುಶಾಹಿ ಕಾಲಕ್ಕೆ ನಾಂದಿಯಾಯಿತು. ಮುಂದೆ ಕಲಬುರ್ಗಿಯಲ್ಲಿ ಆರ್ಥಿಕ ಬದಲಾವಣೆಗಳು ಕಾಣಲಾರಂಭಿಸಿತು. ಕರ್ನಾಟಕದ ಇತರೆಡೆಗಳಲ್ಲೂ ಆಧುನಿಕ ಕೈಗಾರಿಕೀಕರಣ ಆರಂಭವಾಗಿ ರೈಲ್ವೆ ಮತ್ತು ರಸ್ತೆ ಸಾರಿಗೆಗಳಲ್ಲಿ ಉತ್ತಮ ಅನುಕೂಲಗಳು ಒದಗಿದವು. 1888ರಲ್ಲಿ ಗುಲಬರ್ಗಾದಲ್ಲಿ ನೂಲುವ ಮತ್ತು ನೇಯುವ ಗಿರಣಿಯನ್ನು ಪ್ರಾರಂಭಿಸಲಾಯಿತು.

ವಸಾಹತು ಕರ್ನಾಟಕದ ನಗರೀಕರಣದ ಕುರಿತು ಸಮಗ್ರವಾಗಿ ಚರ್ಚೆ ನಡೆಸುವ ಕೃತಿ ಇಲ್ಲಿಯವರೆಗೆ ಬಂದಿಲ್ಲವೆಂದೇ ಹೇಳಬೇಕು. ಆದರೆ ಕರ್ನಾಟಕದ ಕೆಲವು ಪಟ್ಟಣಗಳ ಕುರಿತು ಬಿಡಿ ಬಿಡಿಯಾದ ಅಧ್ಯಯನಗಳು ಆಗಿವೆ. ಬ್ರಿಟಿಷ್ ಆಳ್ವಿಕೆಯ ಅವಧಿಯಲ್ಲಿ ಮೈಸೂರು ನಗರ ಬೆಳವಣಿಗೆಯ ಕೇಂದ್ರವಾಗಿ ಅಭಿವೃದ್ಧಿ ಹೊಂದುತ್ತಿದ್ದು, ಹೈದರಾಬಾದಿನ ನಿಜಾಮನ ಆಳ್ವಿಕೆಗೆ ಒಳಪಟ್ಟಿದ್ದ ಪ್ರದೇಶಗಳು ಹೆಚ್ಚಿನ ಅಭಿವೃದ್ಧಿಯನ್ನು ಹೊಂದಿರಲಿಲ್ಲ. ಈ ತಾರತಮ್ಯಗಳ, ಪ್ರಾದೇಶಿಕ ಅಸಮಾನತೆಗಳ ಕರ್ನಾಟಕದ ನಗರ ವ್ಯವಸ್ಥೆಯ ಕುರಿತು ಸ್ಪಷ್ಟ ಚಿತ್ರಣ ಸಿಗಲು ಕಷ್ಟ ಸಾಧ್ಯ. ವಸಾಹತುನಗರ ನೀತಿಯ ಕುರಿತು ಭಾರತಕ್ಕೆ ಸಂಬಂಧಿಸಿದಂತೆ ಅನೇಕ ಅಧ್ಯಯನಗಳು ನಡೆದಿವೆ. ಉದಾಹರಣೆಗೆ ಬಿಪಿನ್‌ಚಂದ್ರ, ಇರ್ಫಾನ್ ಹಬೀಬ್, ಧರ್ಮಕುಮಾರ್, ಎಂ.ಎನ್. ಪರ್ಸನ್, ಪ್ರಮೀಳಾ ನೈಟಿಂಗೇಲ್, ಶಾರದಾರಾಜು, ಕೆ.ಕೆ.ಪಿಳ್ಳೆ ಮುಂತಾದವರ ಬರಹಗಳಲ್ಲಿ ವಸಾಹತುಶಾಹಿ ಧೋರಣೆಯ ಕುರಿತು ಉಪಯುಕ್ತ ಮಾಹಿತಿಗಳನ್ನು ನೀಡುತ್ತವೆ. ಕಲಬುರ್ಗಿ ನಗರ ವ್ಯವಸ್ಥೆಯಲ್ಲಿ ವಸಾಹತು ಕರ್ನಾಟಕದ ಭೌಗೋಳಿಕ ಎಲ್ಲೆ ಚೌಕಟ್ಟುಗಳು, ಕೃಷಿಯ ವಾಣಿಜ್ಯೀಕರಣ ಮತ್ತು ಮಾರುಕಟ್ಟೆಯ ಪ್ರವೇಶ ವ್ಯಾಪಾರ ಮತ್ತು ವಾಣಿಜ್ಯ, ಕೈಗಾರಿಕೆ ಮತ್ತು ಕೈಗಾರೀಕರಣ, ಸಾರಿಗೆ ವ್ಯವಸ್ಥೆ, ಮುನಿಸಿಪಾಲಿಟಿಗಳು ಮತ್ತು ನಗರಾಡಳಿತ, ಶಿಕ್ಷಣ ವಿಚಾರಗಳನ್ನು ತಿಳಿಸಲಾಗಿದೆ.

ಗುಲ್ಬರ್ಗ ಮತ್ತು ರಾಯಚೂರುಗಳಲ್ಲಿ ಹತ್ತಿಗೆ ಸಂಬಂಧಿಸಿದ ಗಿರಣಿಗಳು ಹೆಚ್ಚು ಸ್ಥಾಪನೆಗೊಂಡವು. ಗುಲ್ಬರ್ಗಾದಲ್ಲಿ 1884ರಲ್ಲಿ ಹೈದರಾಬಾದಿನ ನಿಜಾಮನ ಸರಕಾರದ ನೆರವಿನೊಡನೆ

ಮೆಹಬೂಬ್ ಷಾಹಿ ಕಲ್ಬುರ್ಗಿ ಮಿಲ್ಸ್ ಕಂಪನಿ ಲಿ., ಹೆಸರಿನ ಬಟ್ಟೆ ಗಿರಣಿ ಸ್ಥಾಪಿಸಲಾಯಿತು ಈ ಬಟ್ಟೆ ಗಿರಣಿಯನ್ನು 1888ರಲ್ಲಿ ಭಾರತೀಯ ಕಂಪನಿಗಳ ಕಾಯಿದೆ ಪ್ರಕಾರ ಎಂ.ಎಸ್.ಕೆ. ಮಿಲ್ಸ್ ಕಂಪನಿ ಲಿಮಿಟೆಡ್ ಎಂಬುದಾಗಿ ನೊಂದಣಿ ಮಾಡಿಸಲಾಯಿತು. ಈ ಕಂಪನಿಯ ಹುಟ್ಟಿಗೆ ಬೆಂಗಳೂರಿನವರಾದ ಸಭಾಪತಿ ಆಯ್ಯ ಮತ್ತು ಅಖಿಲಾಂಡಯ್ಯ ಎನ್ನುವವರು ಕಾರಣರಾದರು. ಇವರು ಗುಲಬರ್ಗಾದಲ್ಲಿ ಒಂದು ನೂಲುವ ಮತ್ತು ನೇಯುವ ಕಾರ್ಖಾನೆಯನ್ನು ಸ್ಥಾಪಿಸಲು ಸನ್ನದು ಅಥವಾ ಅನುಮತಿ ನೀಡಬೇಕೆಂದು ನಿಜಾಂ ಸರಕಾರವನ್ನು ಕೋರಿದರು. ಸರಕಾರವು ಸಭಾಪತಿ ಮತ್ತು ಕಂಪನಿ ಎಂಬ ಹೆಸರಿನಲ್ಲಿ ಸನ್ನದ್ದನ್ನು ಮಂಜೂರು ಮಾಡಿತು. ಇದನ್ನು ಮದರಾಸಿನಲ್ಲಿ 1883 ಜುಲೈ 12 ರಂದು ಮೆಹಬೂಬ್ ಷಾಹಿ ಕಲ್ಬುರ್ಗಿ ಮಿಲ್ಸ್ ಕಂಪನಿ ಲಿಮಿಟೆಡ್ ಎಂಬ ಹೆಸರಿನಲ್ಲಿ ನೋಂದಾಯಿಸಲಾಯಿತು. ಅಧಿಕೃತ ಬಂಡವಾಳದ 12 ಲಕ್ಷ ರೂಪಾಯಿಗಳನ್ನು 500 ರೂಪಾಯಿಗಳ 2400 ಷೇರುಗಳನ್ನಾಗಿ ವಿಭಾಗಿಸಲಾಯಿತು. ಕಾರ್ಖಾನೆಯ ಅಡಿಗಲ್ಲನ್ನು 1884 ಜನವರಿ 10ರಂದು ಹಾಕಲಾಯಿತು. ಇದರ ರಚನೆಗೆ ಸಂಬಂಧಿಸಿದಂತೆ ಒಂದು ಕಾನೂನು ದೋಷ ಕಂಡುಬಂದಿದ್ದರಿಂದ ಕಂಪನಿಯನ್ನು ಮುಚ್ಚಿ ನಂತರ ಪುನರ್ ಸ್ಥಾಪಿಸಿ 1888ರ ಆಗಸ್ಟ್ 24ರಂದು ಮುಂಬೈಯಿಂದ ನೊಂದಾಯಿಸಲಾಯಿತು.

ನಂತರ ಎಂ.ಎಸ್.ಕೆ.ಮಿಲ್ ಹೈದರಾಬಾದ್ ಕರ್ನಾಟಕದ ಪ್ರಮುಖ ಜವಳಿ ಉದ್ದಿಮೆಯಾಗಿತ್ತು. ಈ ಮಿಲ್‌ನಲ್ಲಿ ವಿವಿಧ ರೀತಿಯ ಬಟ್ಟೆಗಳನ್ನು ಉತ್ಪಾದಿಸಲಾಗುತ್ತಿತ್ತು. ಸೀರೆ, ಪಂಚೆ, ಪಾಲಿಸ್ಟರ್, ಕಾಟನ್ ಮುಂತಾದವುಗಳು ಇದರಲ್ಲಿ ಉತ್ಪಾದನೆಗೊಂಡು, ಬೇರೆ ಪ್ರದೇಶಗಳಿಗೆ ರಫ್ತಾಗುತ್ತಿದ್ದವು. 1922ರಲ್ಲಿ ಮಿಲ್‌ನಲ್ಲಿ 18,118 ಕದಿರುಗಳು ಮತ್ತು 390 ಮಳಿಗೆಗಳಿದ್ದವು. ಮಿಲ್ಲಿನ ಎಲ್ಲಾ ವಿಭಾಗಗಳಿಗೆ ವಿದ್ಯುತ್ತನ್ನು ಪೂರೈಸಲು ಭೀಮಾ ಪವರ್‌ಹೌಸ್ ಎನ್ನುವ ವಿದ್ಯುತ್ ಪೂರೈಸುವ ಘಟಕವನ್ನು ಸ್ಥಾಪಿಸಲಾಯಿತು. ನಿಜಾಮರ ಸರಕಾರ ಈ ಮಿಲ್ಲಿಗೆ ಎಲ್ಲಾ ರೀತಿಯ ನೆರವನ್ನು ನೀಡಿತ್ತು. ಗುಲಬುರ್ಗಾ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಹತ್ತಿಯನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲಾಗುತ್ತಿದ್ದುದರಿಂದ ಈ ಮಿಲ್‌ನ ಅವಶ್ಯಕತೆ ಇತ್ತು.

ಕುಂಬಾರಿಕೆ, ಕಲ್ಲುಕೆಲಸ, ಮರಗೆಲಸ, ಚಿನ್ನದ ಕೆಲಸ, ಕಮ್ಮಾರಿಕೆ ಭಾಗವಾಗಿದ್ದವು. ಹೊಳಪಿನ ಸುಣ್ಣಕಲ್ಲು, ಶಹಾಬಾದ್, ಚಿತ್ತಾಪುರದ ಕಲ್ಲು ಎಂಬುದಾಗಿಯೂ ಕರೆಯಲಾಗುತ್ತಿತ್ತು. ಈ ಕಲ್ಲನ್ನು ಬಹಳವಾಗಿ ಚಾವಣಿ ಮತ್ತು ನೆಲಗಳಿಗೆ ಬಳಸುತ್ತಿದ್ದರು. ಇದರಿಂದ ನಿಜಾಮರು ವಸಾಹತು ನಗರ ಜೀವನಕ್ಕೆ ಹತ್ತಿರವಾಗುತ್ತಿದ್ದರು. ತದನಂತರ ನಿಜಾಮರ ಕಾಲದಲ್ಲಿ ಇದ್ದ ಇನ್ನೊಂದು ಕೈಗಾರಿಕೆ ಫೆಜ್ ಟೋಪಿಗಳಿಗೆ ಹಾಕುವ ಕುಚ್ಚುಗಳ ತಯಾರಿಕೆ. ಈ ಉದ್ಯಮದಲ್ಲಿ ಸುಮಾರು 500 ಜನ ಹೆಂಗಸರು ಮತ್ತು ಮಕ್ಕಳು ಕೆಲಸ ಮಾಡುತ್ತಿದ್ದರೆಂದು ಅಂದಾಜು ಮಾಡಲಾಗಿದೆ.

ಹೊಸದಾಗಿ ನಿರ್ಮಾಣಗೊಂಡ ರಸ್ತೆಗಳು, ದುರಸ್ತಿಗೊಂಡ ಹಳೆಯ ರಸ್ತೆಗಳು ಹಾಗೂ ರೈಲು ಮಾರ್ಗದ ನಿರ್ಮಾಣ ವ್ಯಾಪಾರ ಚಟುವಟಿಕೆಗಳು ಚುರುಕುಗೊಳ್ಳುವಂತೆ ಮಾಡಿದವು. ಬೆಂಗಳೂರು, ಮೈಸೂರು, ಅರಸಿಕೆರೆ, ದಾವಣಗೆರೆ, ಬಳ್ಳಾರಿ, ಹುಬ್ಬಳ್ಳಿ, ಗದಗ, ರಾಯಚೂರು, ಬಾಗಲಕೋಟೆ, ಗುಲ್ಬರ್ಗಾ, ವಿಜಾಪುರ, ಬೆಳಗಾವಿ, ಮುಂತಾದ ಪ್ರಮುಖ ವ್ಯಾಪಾರ ಕೇಂದ್ರಗಳಿಗೆ ರೈಲು ಸಂಪರ್ಕವನ್ನು ಕಲ್ಪಿಸಲಾಗಿತ್ತು. ಇದರಿಂದಾಗಿ ಮುಂಬಯಿ ಮತ್ತು ಮದರಾಸು ನಗರಗಳಿಗೂ ರೈಲು ಸಂಪರ್ಕ ಬೆಳೆಯುವಂತಾಯಿತು. ವ್ಯಾಪಾರದ ವಸ್ತುಗಳು ಅತ್ಯಂತ ಕಡಿಮೆ ಅವಧಿಯಲ್ಲಿ ಮಾರುಕಟ್ಟೆಗಳಿಗೆ ತಲುಪುವಂತಾಯಿತು. ಬ್ಯಾಂಕುಗಳು ಸಂಸ್ಥೆಗಳು ಉತ್ಪಾದನಾ ಚಟುವಟಿಕೆಗಳಿಗೆ ನೆರವಾದವು. ಸಂಪನ್ಮೂಲಗಳ ಕ್ರೋಢೀಕರಣ ಮತ್ತು ಹೂಡಿಕೆಯ ಜೊತೆ ಜೊತೆಗೆ ವ್ಯಾಪಾರ ಮತ್ತು ವಾಣಿಜ್ಯ ಚಟುವಟಿಕೆಗಳು ಚುರುಕುಗೊಳ್ಳುವಂತೆ ಮಾಡಿದವು.

ಬ್ರಿಟಿಷ್ ಆಳ್ವಿಕೆಯ ಸಂದರ್ಭದಲ್ಲಿ ಕರ್ನಾಟಕದಲ್ಲಿ ಸುಮರು 75 ಬ್ಯಾಂಕುಗಳು ಸ್ಥಾಪನೆಗೊಂಡವು. ಕೇವಲ ಒಂದು ಬ್ಯಾಂಕು ಮಾತ್ರ ಸ್ವತಂತ್ರ ಭಾರತದಲ್ಲಿ ಹುಟ್ಟಿಕೊಂಡಿತು. ಇದು ಕರ್ನಾಟಕವು ಬ್ರಿಟಿಷ್ ಸರ್ಕಾರದ ಅವಧಿಯಲ್ಲಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಎಷ್ಟರಮಟ್ಟಿಗೆ ಸಾಧನೆ ಮಾಡಿತ್ತು ಎನ್ನುವುದನ್ನು ತೋರಿಸುತ್ತದೆ. ಆದರೆ ಸ್ಥಾಪನೆಗೊಂಡ ಬ್ಯಾಂಕುಗಳೆಲ್ಲವೂ ದೀರ್ಘ ಅವಧಿಯವರೆಗೆ ಅಸ್ತಿತ್ವದಲ್ಲಿರಲಿಲ್ಲ. ಕೆಲವು ಬ್ಯಾಂಕುಗಳು ತಾವಾಗಿಯೇ ವಿಸರ್ಜನೆಗೊಂಡವು. ಇನ್ನು ಕೆಲವು ಇಂದಿನವರೆಗೂ (2007) ಮುಂದುವರಿದುಕೊಂಡು ಬಂದಿವೆ.

ಬ್ರಿಟಿಷ್ ಕರ್ನಾಟಕದಲ್ಲಿ ಅಸ್ಥಿತ್ವಕ್ಕೆ ಬಂದ ಬ್ಯಾಂಕುಗಳು ಅದರಲ್ಲಿ ಪ್ರಮುಖವಾಗಿ ಗುಲ್ಬರ್ಗದಲ್ಲಿ ಸ್ಥಾಪನೆಯಾದ ಬ್ಯಾಂಕುಗಳು.

| **ಬ್ಯಾಂಕಿನ ಹೆಸರು** | **ಮುಖ್ಯ ಕಛೇರಿ** | **ನೋಂದಾಯಿಸಲ್ಪಟ್ಟ ದಿನಾಂಕ** |
|---|---|---|
| **ಸರಸ್ವತಿ ಬ್ಯಾಂಕ್ ಲಿ.,** | **ಕಲ್ಬುರ್ಗಿ** | **01–02–1918** |
| **ಗುಲ್ಬರ್ಗ ಬ್ಯಾಂಕಿಂಗ್ ಕಂಪನಿ ಲಿ.,** | **ಗುಲ್ಬರ್ಗಾ** | **06–11–1930** |

ವಸಾಹತು ಕರ್ನಾಟಕದ ನಗರ ವ್ಯವಸ್ಥೆಯನ್ನು ಕುರಿತು ಅಧ್ಯಯನ ಮಾಡುವಾಗ ಬಹುಮುಖ್ಯವಾಗಿ ಕಂಡುಬರುವ ಅಂಶವೆಂದರೆ, ಬ್ರಿಟಿಷ್ ಸರಕಾರ 'ಈಸ್ಟ್ ಇಂಡಿಯಾ' ಕಂಪನಿಗೆ ಒಳಪಟ್ಟ ನಗರ ಕೇಂದ್ರಗಳನ್ನು ಯೋಜನಾಬದ್ಧವಾಗಿ ರೂಪಿಸಲು ಪ್ರಯತ್ನಪಟ್ಟಿರುವುದು. ಆಡಳಿತ, ಶಿಕ್ಷಣ, ಕಂದಾಯ, ನ್ಯಾಯಾಂಗ, ಪೋಲೀಸ್ ಮುಂತಾದ ಇಲಾಖೆಗಳನ್ನು ಶಿಸ್ತುಬದ್ಧವಾಗಿ ಹಾಗೂ ಯೋಜನಾಬದ್ಧವಾಗಿ ಬೆಳಸಲು ಬ್ರಿಟಿಷ್ ಸರಕಾರ ಪ್ರಯತ್ನಿಸಿತು. ಬ್ರಿಟಿಷರ ಆಡಳಿತ ಕಛೇರಿಗಳಿದ್ದ ಪಟ್ಟಣಗಳು ಈ ನಿಟ್ಟಿನಲ್ಲಿ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದುಕೊಂಡವು. ಪಟ್ಟಣಗಳಲ್ಲಿ ಮುನಿಸಿಪಾಲಿಟಿಗಳನ್ನು ಸ್ಥಾಪಿಸುವುದರ

ಮೂಲಕ ನಗರಾಡಳಿತವನ್ನು ವ್ಯವಸ್ಥಿತಗೊಳಿಸುವ ಕೆಲಸವನ್ನು ಬ್ರಿಟಿಷ್ ಸರಕಾರ ಮಾಡಿತು. ನಂತರ ಕಲ್ಬುರ್ಗಿಯಲ್ಲಿ ಸಾಮ್ರಾಜ್ಯ ಶಾಹಿ ಬೇರುಗಳನ್ನು ಗಟ್ಟಿಗೊಳಿಸಿ ಆಯಾಕಟ್ಟಿನ ಪ್ರದೇಶವಾದ ನಗರವನ್ನು ಕೇಂದ್ರವಾಗಿ ರೂಪಿಸುವುದು ಬ್ರೀಟಿಷ್ ಸರಕಾರದ ಆಯ್ಕೆಯಾಗಿತ್ತು. ವಸಾಹತುಶಾಹಿ ಆಳ್ವಿಕೆಯಲ್ಲಿ ಕಲಬುರ್ಗಿ ನಗರ–ಪೇಟೆ–ಪಟ್ಟಣಗಳ ವ್ಯಾಪ್ತಿ ವಿಸ್ತರಿಸಿತು. ಹೊಸ–ಹೊಸ ಪ್ರಯೋಗಗಳನ್ನು ನಡೆಸಲು ಹಾಗೂ ಹೊಸ ಉದ್ದಿಮೆಗಳನ್ನು ನಡೆಸಲು ವಸಾಹತು ಶಾಹಿಯಾಗಿ ಕಲ್ಬುರ್ಗಿ ನಗರ ಕೇಂದ್ರವಾಗಿ ಕಾಣಿಸಿಕೊಳ್ಳಲಾರಂಭಿಸಿತು. ನಂತರ ಇದು ಹಂತ ಹಂತವಾಗಿ ತನ್ನ ಏಳಿಗೆಯನ್ನು ಕಾಣಲಾರಂಭಿಸಿತು.

**ಪರಾಮರ್ಶನ ಗ್ರಂಥಗಳು**


1. Karnataka State Gazetteer Part–II, Chife editor Suryanath. U.Kamath-1983.
2. ಗುಲ್ಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ. ಸಂಪಾದಕರು ಡಾ.ಆರ್.ಗೋಪಾಲ್ ಗ್ಯಾಸೆಟಿಯರ್.
3. ನಗರ ಚರಿತ್ರೆ ಸಂಶೋಧನಾ ವಿಧಾನ ಮತ್ತು ಬರವಣಿಗೆ ಕ್ರಮ ಡಾ. ಕೆ.ಮೋಹನ್ ಕೃಷ್ಣರೈ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ ಹಂಪಿ – 2021, ಪುಟ 8 ಮತ್ತು 9
4. ವಿಕಿಪೀಡಿಯಾ – ನಗರೀಕರಣ ಮತ್ತು Oldid 1167973
5. Urbanisation in India and Economic Survey 2017-2018.
6. ಪರಂಪರೆ ಮಾಲಿಕೆ – ಗುಲ್ಬರ್ಗಾ ಪ್ರಕಟಣೆ ಪ್ರಾಚ್ಯವಸ್ತು ಸಂಗ್ರಾಹಾಲಯಗಳು ಮತ್ತು ಪರಂಪರೆ ಇಲಾಖೆ ಬೆಂಗಳೂರು. ಸಂಪಾದಕರು ವೆಂಕಟೇಶ್ ಮಾಚಕನೂರ್ (ಕೆ.ಎ.ಎಸ್) ಮತ್ತು ಜಿ.ವಿ. ಗಾಯಿತ್ರಿ –2008 ಪುಟ 6,7 ಮತ್ತು 9.
7. ಕರ್ನಾಟಕ ಸಂಕ್ಷಿಪ್ತ ಇತಿಹಾಸ ಡಾ॥ ಸೂರ್ಯನಾಥ ಕಾಮತ್ ಪುಟ–252–253.
8. ಗುಲ್ಬರ್ಗಾ ಜಿಲ್ಲೆ – ಭಾರತದ ಗ್ಯಾಸೆಟಿಯರ್ ಕರ್ನಾಟಕ ರಾಜ್ಯ. ಪುಟ– 225, 226.
9. ಗುಲ್ಬರ್ಗಾ ಜಿಲ್ಲೆ – ಭಾರತದ ಗ್ಯಾಸೆಟಿಯರ್ ಕರ್ನಾಟಕ ರಾಜ್ಯ – 1997, ಪುಟ – 281.